ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕೋರ್ಟುಗಳಲ್ಲಿ ಕೇಸುಗಳನ್ನು ಹತ್ತಾರು ವರ್ಷಗಳ ಕಾಲ ತಳ್ಳುವುದಿಲ್ವಾ?

ಅಧ್ಯಕ್ಷರು : ಶಂಕರಲಿಂಗೇಗೌಡರೆ, ಮಾಹಿತಿಯನ್ನು ತರಿಸೋಣ ಬಿಡಿ. ಚೆನ್ನಿಗಪ್ಪನವರೇ, ತಾವು ಸುಮ್ಮನಿರಿ. ನೆಕ್ಸ್ಟ್ ಕೊಶ್ಚನ್ ಮಿಸ್ಟರ್ ಖಾದ್ರಿಯವರು.

ಶ್ರೀ ಸಿ. ಚೆನ್ನಿಗಪ್ಪ : ಇದರ ಬಗ್ಗೆ ನಾನು ಸರ್ಕಾರವನ್ನು ವಿನಂತಿಮಾಡುತ್ತೇನೆ. ಎಲ್ಲಾ ತಾಲ್ಲೂಕುಗಳಿಗೂ ಕೋರ್ಟು ಬಿಲ್ಡಿಂಗ್ ಆಗಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಪ್ರಶ್ನೆಗೆ ಸರಿಯಾದಂತಹ ಉತ್ತರವೇ ಬಂದಿಲ್ಲ. ನೆಕ್ಸ್ಟ್ ಕೊಶ್ಚನ್ ಎಂದರೆ, ಪ್ರಶ್ನೋತ್ತರವನ್ನು ಏತಕ್ಕಾಗಿ ನಡೆಸುತ್ತೀರಿ? ಪ್ರಶ್ನೋತ್ತರವನ್ನು ನಡೆಸಿದ ಮೇಲೆ ಸಮಸ್ಯೆಯನ್ನು ಸರ್ಕಾರವು ಬಗೆಹರಿಸಬೇಕು.

ಅಧ್ಯಕ್ಷರು : ಅದಕ್ಕಾಗಿ ಸರ್ಕಾರದವರು 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ಆ ಪ್ರಶ್ನೆಯು ಮುಗಿದ ಮೇಲೆ ಮುಂದಿನ ಪ್ರಶ್ನೆ ಶ್ರೀ ಖಾದ್ರಿಯವರದ್ದೇ ಇರುವುದು.

ಶಿಗ್ಗಾವ ತಾಲ್ಲೂಕಿನ ಹುಲಗೂರದಲ್ಲಿ 33 ಕೆ.ವಿ. ಸಬ್‌ಸ್ಟೇಷನ್ ಪ್ರಾರಂಭಿಸುವ ಬಗ್ಗೆ

359(3178) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಹುಲಗೂರದಲ್ಲಿ 33 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ಯೋಜನೆಗೆ ನಿಗಧಿಪಡಿಸಿದ ಹಣವೆಷ್ಟು;

ಇ) ಇದನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಶಿಗ್ಗಾಂವ ತಾಲ್ಲೂಕು ಹುಲಗುಂದದಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪಿಸಲು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮಿತಿಯು ಅಕ್ಟೋಬರ್ 2001ರಲ್ಲಿ ಅನುಮೋದನೆ ನೀಡಿದೆ. ದಿನಾಂಕ: 1-6-2002ರಿಂದ ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯ ನಿರ್ವಹಿಸಲು ಪ್ರಾರಂಭವಾದ ನಂತರ ಸದರಿ ವಿದ್ಯುತ್ ಸಬ್ ಸ್ಟೇಷನ್‌ನ ನಿರ್ಮಾಣದ ಜವಾಬ್ದಾರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿಯು ವಹಿಸಿಕೊಂಡಿದೆ. ಈ ಉಪ ಕೇಂದ್ರಕ್ಕೆ ಬೇಕಾದ ಭೂಮಿಯನ್ನು ಖರೀದಿಸಲಾಗಿದ್ದು, ಭೂಮಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯನ್ನು ಇನ್ನೂ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ, ಪ್ರಸಕ್ತ ವರ್ಷದ ಆಯವ್ಯಯದಲ್ಲಿ (2003-04) ಹಣವನ್ನು ನಿಗಧಿಪಡಿಸಿರುವುದಿಲ್ಲ.

ಇ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ನೇಮಕಗೊಂಡಿದ್ದ ಕನ್ಸಲ್ಟೆಂಟ್ ಆದ ಪಿ.ಆರ್.ಡಿ.ಸಿ. ಸಂಸ್ಥೆಯ ಅಧ್ಯಯನದ ವರದಿಯ ಪ್ರಕಾರ ಈ ಯೋಜನೆಯನ್ನು 2006-07ನೇ ಸಾಲಿನಲ್ಲಿ ಕೈಗೊಳ್ಳಬೇಕಾಗಿರುತ್ತದೆ. ಈಗಾಗಲೇ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರುವ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದರಿಂದ ಸದರಿ ಕಾಮಗಾರಿಯನ್ನು ಸದ್ಯಕ್ಕೆ ಕೈಗೊಳ್ಳುವ ಸಾಧ್ಯತೆ ಇರುವುದಿಲ್ಲ.

ಶ್ರೀ ಎಸ್.ಎಸ್. ಖಾದ್ರಿ : ನಾನು 'ಆ' ಎಂಬ ಪ್ರಶ್ನೆಯನ್ನು ಕೇಳಿದ್ದು ಅವರು ಉತ್ತರದಲ್ಲಿ ಈ ಉಪಕೇಂದ್ರಕ್ಕೆ ಬೇಕಾದ ಭೂಮಿಯನ್ನು ಖರೀದಿಸಲಾಗಿದೆ. ಭೂಮಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ವಶಕ್ಕೆ ಕೊಡಲಾಗಿದೆ ಎಂದು ಸನ್ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಆ ಹುಲಗುಂದ ಗ್ರಾಮ ನನ್ನ ಸ್ವಗ್ರಾಮವಾಗಿರುವುದರಿಂದ ಶಿಗ್ಗಾಂವ ತಾಲ್ಲೂಕಿನ ಅರ್ಧ ಹಳ್ಳಿಗಳು ಆ ವ್ಯಾಪ್ತಿಯಲ್ಲಿ ಬರುವುದರಿಂದ ಇದುವರೆಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯವರು ಅಲ್ಲಿ ಭೂಮಿಯನ್ನು ಖರೀದಿ ಮಾಡಿಲ್ಲ. ಯಾವುದೇ ಅಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಬಗ್ಗೆ ಯಾವುದೇ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಆ ಭಾಗದ ರೈತರಿಗೆ ಮತ್ತು ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಇದೆ. ವಿದ್ಯುತ್ತಿನ ಲೋ ವೋಲ್ಟೇಜ್ ಇರುವುದರಿಂದ ಈ ಸಬ್ ಸ್ಟೇಷನ್‌ನ ಬಹಳ ಅವಶ್ಯ ಇದೆ. ಆದರೆ ಇವರು ಉತ್ತರದಲ್ಲಿ ಭೂಮಿಯನ್ನು ಖರೀದಿ ಮಾಡಿ ಸಂಸ್ಥೆಯ ವಶಕ್ಕೆ ಪಡೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ ಇದುವರೆವಿಗೂ ಯಾವುದೇ ಕೆಲಸವನ್ನು ಆ ಸಂಸ್ಥೆಯವರು ಮಾಡಿಲ್ಲವೆನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಆ ಕೇಂದ್ರಕ್ಕೆ ಬೇಕಾದಂತಹ ಒಂದು ಎಕರೆ ಭೂಮಿಯನ್ನು 15-11-2000ದಂದು ಈಗಾಗಲೇ ವಶಕ್ಕೆ ತೆಗೆದುಕೊಳ್ಳಲಾಗಿದೆ. ಆದರೆ ಈ ಸಬ್‌ಸ್ಟೇಷನ್ ಕಾರ್ಯ ಪವರ್ ರಿಸೋರ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ರಿಪೋರ್ಟ್ ಪ್ರಕಾರ ಈ ಸದ್ಯ ಏನಾಗಿದೆ ಎಂದರೆ, ಅದು ತೆಗೆದುಕೊಳ್ಳುವುದಿಲ್ಲ, 2006-07ನೇ ವರ್ಷದಲ್ಲಿ ಈ ಕಾರ್ಯವನ್ನು ತೆಗೆದುಕೊಂಡು ಪೂರ್ತಿಗೊಳಿಸಬೇಕೆಂದು ನಮ್ಮ ರಿಪೋರ್ಟ್ ಇದೆ. ಅದಕ್ಕಾಗಿ ತಮ್ಮ ಈ ಸಬ್ ಸ್ಟೇಷನ್ ಕಾರ್ಯ 2006-07ರಲ್ಲಿ ಪೂರ್ತಿಗೊಳಿಸಲಾಗುವುದು. ಈಗಾಗಲೇ ಒಂದು ಎಕರೆ ಭೂಮಿಯನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್.ಎಸ್. ಖಾದ್ರಿ : ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಇದುವರೆವಿಗೂ ಅಲ್ಲಿ ಏನೂ ಮಾಡಿರುವುದಿಲ್ಲ. ಅದು ನನ್ನ ಸ್ವಗ್ರಾಮವಾಗಿದ್ದು, ಭೂಮಿಯನ್ನು ಕೊಟ್ಟಿರತಕ್ಕಂತಹವರೂ ಕೂಡ ನಮ್ಮ ಮನೆಯ ಪಕ್ಕದಲ್ಲಿದ್ದಾರೆ. ನಮ್ಮ ವಿದ್ಯುತ್ ಸರಬರಾಜು ಕಂಪನಿಯಿಂದ ಇದುವರೆವಿಗೂ ಅವರಿಗೆ ಏನೂ ಇಂಟಿಮೇಷನ್ ಕೂಡ ಬಂದಿರುವುದಿಲ್ಲ. 2006ರಲ್ಲಿ ತಾವು ಏನು ಮಾಡುತ್ತೇನೆಂದು ಹೇಳಿದ್ದೀರಿ, ಅದಕ್ಕಿಂತ ಮೊದಲಿಗೆ ಮಾಡಬೇಕು, ಏಕೆಂದರೆ ಶಿಗ್ಗಾಂವ್ ತಾಲ್ಲೂಕಿನ ಅರ್ಧ ಹಳ್ಳಿಗಳಿಗೆ ವಿದ್ಯುತ್‌ನ ತೀವ್ರ ಸಮಸ್ಯೆ ಇದೆ. ಅದಕ್ಕೆ ಅಲ್ಲಿ ತೀವ್ರಗತಿಯಲ್ಲಿ ವಿದ್ಯುತ್ ಸಬ್ ಸ್ಟೇಷನ್ ಆಗಬೇಕು, ಆ ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೇಗನೆ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಕೋರುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ಈಗಾಗಲೇ ಭೂಮಿಯನ್ನು ತೆಗೆದುಕೊಂಡು ಆಗಿದೆ, ಈಗ ರಿಪೋರ್ಟಿನ ಪ್ರಕಾರ 2006-07ರಲ್ಲಿ ಆ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ನಿರ್ಧರಿಸಲಾಗಿದೆ. ಆ ಸಮಯದ ಪ್ರಕಾರ ಆ ಕಾರ್ಯವನ್ನು ತೆಗೆದುಕೊಂಡು ಅದನ್ನು ಮುಗಿಸಿಕೊಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಕೃಷ್ಣಮೂರ್ತಿಯವರು, ತಾವು ಶಿಗ್ಗಾಂವ್ ಬಗ್ಗೆ ಕೇಳುವುದಿದ್ದರೆ ಮಾತ್ರ ಕೇಳಿ. This is not a general question. It is pertaining to a certain Taluk. ಎಲ್ಲರಿಗೂ ನಾನು ಅಲೌ ಮಾಡಬೇಕಾಗುತ್ತದೆ. I can't allow you. ಖಾದ್ರಿಯವರೇ ತಾವು ಹೇಳಿ. ಮಾನ್ಯ ಕೃಷ್ಣಮೂರ್ತಿಯವರು ದಯವಿಟ್ಟು ಕ್ಷಮಿಸಬೇಕು. ಶಿಗ್ಗಾಂವ್ ಬಗ್ಗೆ ಕೇಳುವುದಿದ್ದರೆ ಕೇಳಿ,

ಶ್ರೀ ಸಿ. ಚೆನ್ನಿಗಪ್ಪ : ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಚೆನ್ನಿಗಪ್ಪನವರೆ, ಅವರು ಬೀರೂರಿನ ಬಗ್ಗೆ ಪ್ರಶ್ನೆ ಕೇಳಿದರೆ, ಅದೇ ರೀತಿಯಾಗಿ 50 ಜನ ಕೇಳುತ್ತಾರೆ, ಅದಕ್ಕೆ ಯಾರು ಉತ್ತರ ಹೇಳುವುದು? ಅವರವರ ತಾಲ್ಲೂಕಿನವರು ಕೇಳುತ್ತಾರೆ, ಐ ಕಾಂಟ್ ಅಲೌ, ಖಾದ್ರಿಯವರೇ ತಾವು ಕೇಳಿ. ಕೃಷ್ಣಮೂರ್ತಿಯವರೇ, I won't allow. ಶಿಗ್ಗಾಂವ್ ಬಗ್ಗೆ ಕೇಳುವುದಿದ್ದರೆ ಕೇಳಿ, ಐ ಹ್ಯಾವ್ ನೋ ಅಬ್ಜಕ್ಷನ್. ಅವರು ಶಿಗ್ಗಾಂವ್‌ನಲ್ಲಿ ಸಬ್‌ಸ್ಟೇಷನ್ ಬಗ್ಗೆ ಕೇಳಿದ್ದಾರೆ. This is not a general question. It is pertaining to individual taluka.

ಶ್ರೀ ಎಸ್.ಎಸ್. ಖಾದ್ರಿ : ಭೂಮಿಯನ್ನು ಸಂಸ್ಥೆಯು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ ಹುಲಗೂರ ನನ್ನ ಸ್ವಗ್ರಾಮವಾಗಿರುವುದರಿಂದ ಯಾವುದೇ ಅಂತಹ ಕಾರ್ಯಚಟುವಟಿಕೆ ಸಂಸ್ಥೆಯಿಂದ ಆಗಿಲ್ಲ. ಅದರ ಜೊತೆಗೆ 2006–07ರಲ್ಲಿ ಪೂರ್ಣ ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ ಅವಧಿಯಲ್ಲಿ ಅದನ್ನು ಮುಗಿಸಿದರೆ ಒಳ್ಳೆಯದಾಗುತ್ತದೆ. ತೀವ್ರ ಬರಗಾಲವಿದೆ. ಕುಡಿಯುವ ನೀರಿನ ಸಮಸ್ಯೆ ಇದೆ, ರೈತರ ಐ.ಪಿ.ಸೆಟ್‌ಗೂ ಕೂಡ ಬಹಳ ತೊಂದರೆ ಇದೆ, ಶಿಗ್ಗಾಂವ್‌ನ ಅರ್ಧ ತಾಲ್ಲೂಕಿನ ಸಮಸ್ಯೆಯನ್ನೂ ಕೂಡ ಸಾಲ್ವ್ ಮಾಡಿದಂತಾಗುತ್ತದೆ. ಸನ್ಮಾನ್ಯ ಸಚಿವರು, ಇದೇ ಒಂದು ಅವಧಿಯಲ್ಲಿ ಆ ಒಂದು ಹುಲಗೂರದಲ್ಲಿ 33 ಸಬ್ ಸ್ಟೇಷನ್ ಪೂರ್ಣ ಮಾಡಿಕೊಡುತ್ತೇವೆಂದು ಹೇಳಿ ತಮ್ಮ ಮುಖಾಂತರ ಈ ಸದನಕ್ಕೆ ಭರವಸೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ಇದರ ಬಗ್ಗೆ ಸಂಬಂಧಪಟ್ಟವರ ಜೊತೆ ಚರ್ಚೆ ಮಾಡುತ್ತೇನೆ. ನಮ್ಮ ರಿಪೋರ್ಟ್‌ನ ಪ್ರಕಾರ 2006–07 ಆಗುತ್ತದೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ನನ್ನ ವರದಿಯ ಪ್ರಕಾರ ಭೂಮಿಯನ್ನು ತೆಗೆದುಕೊಂಡು ಅದಕ್ಕೆ ಬೇಲಿ ತಂತಿಯನ್ನು ಕೂಡ ಹಾಕಲಾಗಿದೆ, ನಮ್ಮ ಪೊಸಿಷನ್‌ನಲ್ಲಿ ತೆಗೆದುಕೊಂಡು ಫೆನ್ಸಿಂಗ್ ಕೂಡ ಮಾಡಲಾಗಿದೆ: ಎಂದು ವರದಿಯಲ್ಲಿದೆ. ಅದು ಏನಾದರೂ ಇದ್ದರೂ ಕೂಡ ಸದಸ್ಯರ ಜೊತೆ ಚರ್ಚೆ ಮಾಡಿ ಏನು ಮಾಡಬೇಕೆಂದು ನೋಡುತ್ತೇನೆ.

ವಾಣಿಜ್ಯ ತೆರಿಗೆ ಬಾಕಿಯನ್ನು ವಸೂಲು ಮಾಡುವ ಬಗ್ಗೆ

360 (3008) **ಶ್ರೀ ರವೀಂದ್ರನಾಥ ಎಸ್.ಎ (ಮಾಯಕೊಂಡ)** : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999ರ ಡಿಸೆಂಬರ್‌ವರೆಗಿನ ಬಾಕಿ ಇರುವ ವಾಣಿಜ್ಯ ತೆರಿಗೆಯ ಮೊತ್ತ ಎಷ್ಟು;

ಆ) 2000 ಜನವರಿಯಿಂದ 31 ಮಾರ್ಚ್ 2003ರ ವರೆಗಿನ ಅವಧಿಯಲ್ಲಿ ವಾಣಿಜ್ಯ ತೆರಿಗೆ ಬಾಕಿ ಇರುವ ಮೊತ್ತವೆಷ್ಟು ಮತ್ತು ಆ ಸಂಸ್ಥೆಗಳ ವಿವರ ನೀಡುವುದು;

ಇ) ಈ ಬಾಕಿಯನ್ನು ವಸೂಲು ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?